# ನಂಬರ್ 1 ಯಾರು?

**ಕನ್ನಡ ಚಿತ್ರರಂಗದಲ್ಲಿ 2017ರಲ್ಲಿ ನಂಬರ್ 1 ನಟ ಯಾರು?**

ಪ್ರತಿ ಡಿಸೆಂಬರ್‌ನಲ್ಲಿ ಗಾಂಧಿನಗರದಲ್ಲಿ ಚರ್ಚೆಯಾಗುವ ಪ್ರಶ್ನೆಯಿದು. ಆ ವರ್ಷ ನಾಯಕನೊಬ್ಬನ ಗೆದ್ದ ಚಿತ್ರಗಳು ಹಾಗೂ ಆ ನಾಯಕ ಪಡೆಯುವ ಸಂಭಾವನೆಯ ನಿಟ್ಟಿನಲ್ಲಿ 'ನಂಬರ್ ಒನ್' ಪಟ್ಟವನ್ನು ನಿರ್ಧರಿಸಲಾಗುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಕನ್ನಡ ಚಿತ್ರರಂಗದ ಮುಂಚೂಣಿ ನಟ ಯಾರು ಎನ್ನುವ ಪ್ರಶ್ನೆಯನ್ನು ಪರಿಶೀಲಿಸಬೇಕಾಗುತ್ತದೆ.

ಮೂರು ಮತ್ತೊಂದು ಎನ್ನುವಂತೆ, ಇತ್ತೀಚಿನ ವರ್ಷಗಳಲ್ಲಿ ಮುಂಚೂಣಿ ನಾಯಕ ನಟನ ಪಟ್ಟಕ್ಕೆ ಚರ್ಚೆಗೆ ಬರುವ ಹೆಸರುಗಳು ನಾಲ್ಕು. ಪುನೀತ್ ರಾಜ್‌ಕುಮಾರ್, ದರ್ಶನ್, ಸುದೀಪ್ ಹಾಗೂ ಯಶ್. ನಾಲ್ವರೂ ಸತತವಾಗಿ ಯಶಸ್ವೀ ಚಿತ್ರಗಳನ್ನು ಕೊಟ್ಟು ತಮ್ಮದೇ ಆದ ವರ್ಚಸ್ಸನ್ನು ರೂಪಿಸಿಕೊಂಡವರು ಹಾಗೂ ದೊಡ್ಡ ಅಭಿಮಾನಿ ಬಳಗವನ್ನು ಹೊಂದಿರುವ ಕಲಾವಿದರು.

2017ರಲ್ಲಿ ತೆರೆಕಂಡ 'ರಾಜ್‌ಕುಮಾರ' ಪುನೀತ್‌ರ ಯಶಸ್ವೀ ಚಿತ್ರಗಳಲ್ಲೊಂದು. ವರ್ಷದ ಯಶಸ್ವೀ ಚಿತ್ರಗಳಲ್ಲಿ ಮೊದಲ ಸ್ಥಾನದಲ್ಲಿ ನಿಲ್ಲುವ ಸಂತೋಷ್ ಆನಂದರಾಮ್ ನಿರ್ದೇಶನದ 'ರಾಜ್‌ಕುಮಾರ' 70 ಕೋಟಿ ರೂಪಾಯಿಗೂ ಹೆಚ್ಚಿನ ವಹಿವಾಟು ನಡೆಸಿರುವ ಅಂದಾಜಿದೆ. ಕಿರುತೆರೆಯಲ್ಲಿ ಮುಳುಗಿಹೋಗಿದ್ದ ಗೃಹಿಣಿಯರು ಮತ್ತೆ ಥಿಯೇಟರ್‌ಗಳತ್ತ ಮುಖ ಮಾಡುವಂತೆ ಮಾಡಿದ ಯಶಸ್ಸು ಈ ಚಿತ್ರದ್ದು. ಅವರ ನಟನೆಯ 'ಅಂಜನೀಪುತ್ರ' ವರ್ಷದ ಕೊನೆಯಲ್ಲಿ ತೆರೆಕಾಣುತ್ತಿದೆ. ಈ ಸಿನಿಮಾದ ಬಗ್ಗೆ ಗಾಂಧಿನಗರದಲ್ಲಿ ಒಳ್ಳೆಯ ಮಾತುಗಳಿವೆ. ಈ ಸಿನಿಮಾದ ಯಶಸ್ಸಿನ ಹಿನ್ನೆಲೆಯಲ್ಲಿ 'ವರ್ಷದ ನಟ' ಗೌರವ ಪುನೀತ್‌ಗೆ ಸಲ್ಲಬೇಕು. ವರ್ಷದ ಕೊನೆಯಲ್ಲಿ ಪುನೀತ್ ನಡೆಸಿಕೊಡುವ 'ಫ್ಯಾಮಿಲಿ ಪವರ್' ಎನ್ನುವ ರಿಯಾಲಿಟಿ ಶೋ 'ಕಲರ್ಸ್ ಕನ್ನಡ' ವಾಹಿನಿಯಲ್ಲಿ ಶುರುವಾಗಿದೆ. ಈ ಕೌಟುಂಬಿಕ ಶೋ ಕೂಡ ಅವರ ವರ್ಚಸ್ಸಿನ ಹೊಳಪಿಗೆ ಪೂರಕವಾಗಿದೆ. ಸ್ವಂತ ನಿರ್ಮಾಣ ಸಂಸ್ಥೆಯನ್ನೂ ಪ್ರಾರಂಭಿಸಿರುವ ಪುನೀತ್, 'ಕವಲುದಾರಿ' ಎನ್ನುವ ಸಿನಿಮಾ ನಿರ್ಮಿಸುತ್ತಿದ್ದಾರೆ. ಮ್ಯೂಸಿಕ್ ಸಂಸ್ಥೆಯೊಂದನ್ನು ಆರಂಭಿಸುವ ಮೂಲಕ ಸಿನಿಮಾ ಸಂಗೀತ ಪೇಟೆಯಲ್ಲೂ ಚಟುವಟಿಕೆ ಆರಂಭಿಸಿದ್ದಾರೆ.

ಆದರೆ, 'ರಾಜ್‌ಕುಮಾರ' ಚಿತ್ರದ ಗೆಲುವಿನ ಹಿನ್ನೆಲೆಯಲ್ಲಿ ಪುನೀತ್‌ರನ್ನು ನಂಬರ್ 1 ಕುರ್ಚಿಯ ಮೇಲೆ ಕೂರಿಸಿದರೆ ಅದು ಅವಸರದ ನಿರ್ಧಾರವಾಗುತ್ತದೆ. ಯಶಸ್ಸಿನಲ್ಲಿ ಸುದೀಪ್ ಕೂಡ ಕಡಿಮೆಯೇನಲ್ಲ. ಅವರ 'ಹೆಬ್ಬುಲಿ' ಸಿನಿಮಾ ಅಭಿಮಾನಿಗಳಿಗೆ ಇಷ್ಟವಾಗಿತ್ತು. 'ಬಿಗ್ ಬಾಸ್' ರಿಯಾಲಿಟಿ ಶೋ ಕೂಡ ಸುದೀಪ್ ಜನಪ್ರಿಯತೆಗೆ ಹಿಡಿದ ಕನ್ನಡಿಯಂತಿದೆ. ಹಾಲಿವುಡ್ ಚಿತ್ರವೊಂದರಲ್ಲೂ ಸುದೀಪ್ ನಟಿಸುತ್ತಿದ್ದಾರೆ. ಕರ್ನಾಟಕದ ವ್ಯಾಪ್ತಿಯನ್ನು ಮೀರಿ ಅವರ ಜನಪ್ರಿಯತೆ ಬೆಳೆಯುತ್ತಿದೆ. ಸಂಭಾವನೆ ಏಳೆಂಟು ಕೋಟಿ ರೂಪಾಯಿ ನಡುವೆ ಸುಳಿದಾಡುತ್ತಿದೆ ಎನ್ನುವ ಅಂದಾಜಿದೆ. ಹೀಗಾಗಿ ಸುದೀಪ್ ನಂ. 1 ಸ್ಥಾನಕ್ಕೆ ಪ್ರಬಲ ಸ್ಪರ್ಧಿ.

ದರ್ಶನ್ ಅವರಂತೂ ಅಭಿಮಾನಿಗಳ ನಡುವೆ 'ಬಾಕ್ಸಾಫೀಸ್ ಸುಲ್ತಾನ್' ಎಂದೇ ಹೆಸರಾದವರು. 'ಚಕ್ರವರ್ತಿ' ಹಾಗೂ 'ತಾರಕ್' 2017ರಲ್ಲಿ ತೆರೆಕಂಡ ದರ್ಶನ್ ಸಿನಿಮಾಗಳು. ಎರಡೂ ಒಳ್ಳೆಯ ಓಪನಿಂಗ್ ಕಂಡರೂ, ಗೆಲುವಿನ ರುಚಿ ದೀರ್ಘ ಕಾಲ ಉಳಿಯಲಿಲ್ಲ. ನಿರೀಕ್ಷಿತ ಗೆಲುವು ಕಾಣದಿದ್ದರೂ ದರ್ಶನ್ ಅಭಿಮಾನಿಗಳ ಬಳಗವೇನೂ ಕರಗಿಲ್ಲ. ದರ್ಶನ್ ವೃತ್ತಿಬದುಕಿನ 50ನೇ ಚಿತ್ರ 'ಕುರುಕ್ಷೇತ್ರ' 2018ರ ಮೊದಲ ತ್ರೈಮಾಸಿಕದಲ್ಲಿ ತೆರೆಕಾಣಲಿದೆ. ಈ ಚಿತ್ರದಲ್ಲಿ ಅವರದು ದುರ್ಯೋಧನನ ಪಾತ್ರ. 'ಕುರುಕ್ಷೇತ್ರ' ಗೆದ್ದಲ್ಲಿ 'ಬಾಕ್ಸಾಫೀಸ್ ಸುಲ್ತಾನ್' ಎನ್ನುವ



'ರಾಜ್‌ಕುಮಾರ' ಪುನೀತ್



ಪುನೀತ್, ಸುದೀಪ್ ನಟನೆಯ ಕನಿಷ್ಠ ಎರಡು ಚಿತ್ರಗಳಾದರೂ ಬರುವ ವರ್ಷ ತೆರೆ ಕಾಣಲಿವೆ. ಯೋಗರಾಜ್ ಭಟ್‌ರ ಸದ್ಯದ ಉತ್ಸಾಹವನ್ನು ನೋಡಿದರೆ, 2018ರಲ್ಲಿ ಅವರ ನಿರ್ದೇಶನದ ಎರಡು ಸಿನಿಮಾಗಳು ತೆರೆಕಾಣಬಹುದು. ದರ್ಶನ್‌ರ ಮಹತ್ವಾಕಾಂಕ್ಷೆಯ 'ಕುರುಕ್ಷೇತ್ರ' ತೆರೆಕಾಣಬೇಕಾದ ಚಿತ್ರಗಳ ಪಟ್ಟಿಯಲ್ಲಿರುವ ಬಹುನಿರೀಕ್ಷಿತ ಸಿನಿಮಾ. ಪ್ರೇಮ್ ನಿರ್ದೇಶನದ 'ದಿ ವಿಲನ್' 2018ರಲ್ಲಿ ಸುದ್ದಿ ಮಾಡಲಿರುವ ಮತ್ತೊಂದು ಸಿನಿಮಾ. ಈ ಚಿತ್ರದಲ್ಲಿ, ಶಿವರಾಜ್‌ಕುಮಾರ್, ಸುದೀಪ್ ಮುಖ್ಯ ಪಾತ್ರಗಳಲ್ಲಿ ನಟಿಸಿರುವುದು ವಿಶೇಷ.

### ತೆರೆಯಾಚೆಗಿನ ರಾಜಕಾರಣ!

ರಾಜಕುಮಾರ್, ವಿಷ್ಣುವರ್ಧನ್ ನಿಧನಾನಂತರ ಕನ್ನಡ ಚಿತ್ರರಂಗವನ್ನು ಕಾಡುತ್ತಿರುವ ನಾಯಕತ್ವದ ಕೊರತೆ ಪ್ರಸ್ತುತ ಎದ್ದುಕಾಣುವಷ್ಟು ಸ್ಪಷ್ಟವಾಗಿದೆ. ನಾಯಕತ್ವದ ಕೊನೆಯ ಕೊಂಡಿಯಂತಿದ್ದ ಪಾರ್ವತಮ್ಮ ರಾಜ್‌ಕುಮಾರ್ ಅವರ ನಿರ್ಗಮನಕ್ಕೂ 2017 ಸಾಕ್ಷಿಯಾಯಿತು. ಆ ಮೂಲಕ ಕನ್ನಡ ಚಿತ್ರರಂಗದ ಶಕ್ತಿಕೇಂದ್ರಗಳಲ್ಲೊಂದು ಇತಿಹಾಸದ ಪುಟ ಸೇರಿತು.

ಇತ್ತೀಚಿನ ವರ್ಷಗಳಲ್ಲಿ ತಂಟೆ ತಕರಾರು ಸಮಸ್ಯೆ ಎದುರಾದಾಗಲೆಲ್ಲ ಕನ್ನಡ ಚಿತ್ರರಂಗ ಅಂಬರೀಷ್ ಅವರತ್ತ ನೋಡುತ್ತಿತ್ತು. ಆದರೆ, ಸದ್ಯಕ್ಕೆ ಅಂಬರೀಷ್ ರಾಜಕಾರಣ ಹಾಗೂ ಸಿನಿಮಾ ಎರಡೂ ಕಡೆ ಗೌರವಪಾತ್ರಗಳಲ್ಲಷ್ಟೇ ಕಾಣಿಸಿಕೊಳ್ಳುತ್ತಿದ್ದಾರೆ. ಡಬ್ಬಿಂಗ್ ಚಳವಳಿಯಲ್ಲಿ ಉಂಟಾದ ಪ್ರತಿರೋಧ ಶಿವರಾಜ್ ಅವರನ್ನು ನಟನೆಗಷ್ಟೇ ಸೀಮಿತಗೊಳ್ಳುವಂತೆ ಮಾಡಿದೆ. ರವಿಚಂದ್ರನ್ ಮರಳಿ ಫಾರ್ಮ್–ಚಾರ್ಮ್ ಕಂಡುಕೊಳ್ಳುವ ಪ್ರಯತ್ನದಲ್ಲಿ ದಣಿದಿರುವಂತಿದೆ. ಸುದೀಪ್‌ರ ಕ್ಯಾಪ್ಟನ್ಸಿ ಕ್ರಿಕೆಟ್‌ಗೆ ಸೀಮಿತವಾಗಿದೆ. ಇಂಥ ಸಂದರ್ಭದಲ್ಲಿ, ಕನ್ನಡ ಚಿತ್ರರಂಗ ಎನ್ನುವ ಕುಟುಂಬದ ಜಗಲಿ ಖಾಲಿಯೇ ಉಳಿದಿದೆ.

ಸದ್ಯಕ್ಕೆ ಕನ್ನಡ ಚಿತ್ರರಂಗದ ನಾಯಕತ್ವವನ್ನು ವಹಿಸಿಕೊಳ್ಳಲು ಉತ್ಸಾಹ ತೋರಿಸುತ್ತಿರುವ ಬಹುತೇಕರು ರಾಜಕಾರಣದ ನಂಟುಳ್ಳವರೇ ಆಗಿದ್ದಾರೆ. ರಾಕ್‌ಲೈನ್ ವೆಂಕಟೇಶ್, ಸಾ.ರಾ. ಗೋವಿಂದ್ ಅವರಿಗೆ ಗಾಂಧಿನಗರ ಹಾಗೂ ವಿಧಾನಸೌಧದ ನಡುವೆ ಹೆಚ್ಚಿನ ಅಂತರವೇನಿಲ್ಲ. 'ಕುರುಕ್ಷೇತ್ರ'ದ ಜೊತೆಗೆ ತಮ್ಮ ಹೆಸರನ್ನೂ ಅಂಟಿಸಿಕೊಂಡಿರುವ ನಿರ್ಮಾಪಕ ಮುನಿರತ್ನ ಅವರಂತೂ ವೃತ್ತಿಪರ ರಾಜಕಾರಣಿ.